1. ಬೂಚಿ ಬಂದಿದೆ,

ರಂಗ ಬೂಚಿ ಬಂದಿದೆ ||ಪ||

ಚಾಚಿ ಕುಡಿದು ಸುಮ್ಮನೆ

ನೀ ಪಾಚಿಕೊಳ್ಳೊ ಕೃಷ್ಣಯ್ಯ ||ಅ||

ನಾಲ್ಕು ಮುಖದ ಬೂಚಿಯೊಂದು

ಗೋಕುಲಕ್ಕೆ ಓಡಿ ಬಂದು

ಲೋಕರನ್ನು ಎಳೆದುಕೊಂಡು

ಕಾಕು ಮಾಡಿ ಒಯ್ಯುವುದಕೆ ||

ಮೂರು ಕಣ್ಣಿನ ಬೂಚಿಯೊಂದು
ಊರೂರ ಸುತ್ತಿ ಬಂದು ದ್ವಾರದಲ್ಲಿ
ನಿಂತಿದೆ ನೋಡೊ ಪೋರರನ್ನು
ಒಯ್ಯುವುದಕೆ ||

ಅಂಗವೆಲ್ಲ ಕಂಗಳುಳ್ಳ |ಶೃಂಗಾರ ಮುಖದ
ಬೂಚಿ| ಬಂಗಾರದಂಥ ಮಕ್ಕಳನೆಲ್ಲ
ಕಂಗೆಡಿಸಿ ಒಯ್ಯುವುದಕೆ ||

ಆರು ಮುಖದ ಬೂಚಿಯೊಂದು|ಈರಾರು
ಕಂಗಳದಕೆ |ವಾರು ವಾರು ಅಳುವ ಮಕ್ಕಳ
|ದೂರ ಸೆಳೆದು ಒಯ್ಯುವುದಕೆ ||

ಮರದ ಮೇಲೆ ಇರುವುದೊಂದು| ಕರಾಳ
ಮುಖದ ಬೂಚಿ| ತರಳರನ್ನು
ಎಳೆದುಕೊಂಡು|
ಪುರಂದರವಿಠಲಗೊಪ್ಪಿಸಲಿಕೆ ||

2. ಜೀಕೋಣ ಬನ್ನಿ ಜೋಕಾಲಿ

ಜೀವನದ ಅಮರ ಜೋಕಾಲಿ||

ಸಂತಸದಿ ಚಿಂತೆಯನು ನೀಗಿ

ಅಂತರವ ತೊರೆದು ಒಂದಾಗಿ|

ಕಡಲಿನಲಿ ಕುಣಿವ ಅಲೆಯಾಗಿ

ತಡೆಯದಲೇ ನಾವು ಒಂದಾಗಿ||೧||

ಬೀಳುವೆವು ಎಂಬ ಭಯವೇಕೆ

ಬಳಲಿಕೆಯ ಸುಳಿವು ನಮಗೇಕೆ|

ಬಿರುಗಾಳಿಯಲ್ಲಿ ತೋಗೋಣ

ಮಳೆ ಬಿಲ್ಲಿನಂತೆ ಮಣಿಯೋಣ||೨||

ಬಡತನದ ಗಿಡವ ಕಡಿಯೋಣ

ಅಡೆತಡೆಯ ತೊಡಕು ಬಿಡಿಸೋಣ||

ಬಿಡುಗಡೆಯ ಹಾಡು ಹಾಡೋಣ

ಕಡೆತನಕ ತೂಗಿ ನಲಿಯೋಣ||೩||

3. ರಚನೆ : ಡಾ|| ಎಚ್. ಎಸ್. ವೆಂಕಟೇಶಮೂರ್ತಿ.

ಝುಕ್ಕಣಕ್ಕ ಝುಕ್ಕಣಕ್ಕ ಝುಕ್ಕಣಕ್ಕ ಜೈ
ದೊಡ್ಡಣ್ಣೋರು ಕುಣೀತಿದ್ರು ಥಕ ಧಿನ್ನ
ಧಿನ್ನ ಥೈ||

ಕುಣೀತಿದ್ರೆ ದೊಡ್ಡಣ್ಣೋರು
ಹೊತ್ತುಕೊಂಡು ವೈ
ಇಟ್ಟೇಬಿಟ್ರು ಪುಟ್ಟವ್ನೋರು ನೆತ್ತಿ ಮೇಲೆ
ಕೈ ||

ದಾರಿಲಾಗ ಬರ್ತಾ ಇದ್ರು ಅಡಕೇ ಮಂಡಿ
ಪೈ|ಮಾಡಿಕೊಳ್ತಾ ಎನೋ ಲೆಕ್ಕ
ಜೇಬಲ್ಲಿತ್ತು ಕೈ
ದೊಡ್ಡಣ್ಣೋರು ಢಿಕ್ಕೀ ಕೊಟ್ರು ಬಿದ್ದೇ
ಬಿಟ್ರು ಪೈ|
ಮಂಡೇ ಒಡದ್ರೂ ಜೇಬಲ್ಲಿತ್ತು ಪೈ
ಸಮೇತ ಕೈ||೧||

ದೊಡ್ಡಣ್ಣೋರು ಪೈ ಮಾವನ್ನ ನೋಡ್ತಾ
ಅಂದ್ರು ಹೊಯ್| ಒಬ್ರೇ ಹೀಗೆ
ಬೀಳ್ಸಬಹುಬೇನೋ ಹಿಡೀರಿ ನನ್ನ ಕೈ||
ಎತ್ಲೋವಾಗ ಕೂಗ್ತಾ ಇದ್ರು
ಹನುಮಣ್ಣೋರ್ಗೆ ಜೈ
ಆಕಡೆಗವ್ರು ಈ ಕಡೆಗಿವ್ರು ಹೇಳ್ತಾ ಇದ್ರು
ಬೈ||೩||

4.ಸೇವಂತಿಗೆ ಚೆಂಡಿನಂಥ ಮುದ್ದು ಕೋಳಿ
ತಾಯಿ ಮಡಿಲಿನಲಿ ಬೀಡು ಬಿಟ್ಟ
ಮುದ್ದು ಕೋಳಿ ||

ಅಮ್ಮನಿತ್ತದೀ ಅಮೃತ ಎನುವ ಕೋಳಿ
ಅಮ್ಮನಿತ್ತದೀ ಅಮೃತ ಎನುವ ಕೋಳಿ
ಒಳ್ಳೆ ನಲ್ಮೆಯಿಂದ ಬೆಳೆದು ಬಂದ
ಮುದ್ದು ಕೋಳಿ ||

ತಾಯಿ ತೊರೆದು ಘಳಿಗೆ ಕೂಡ
ಅಗಲಲಾರದು
ತನ್ನ ಸೋದರರ ಮರೆತು ಬಿಟ್ಟು
ಮರೆಯಲಾರದು ||

ಜಾಣ ಮರಿ ಮುದ್ದು ಕೋಳಿ
ಮಾತನಾಡದು
ತನ್ನ ಸಾಕಿದವರ ಬಿಟ್ಟು ದೂರ ಓಡಿ
ಹೋಗದು ||

ಪ್ರೇಮವಿರುವ ಮನೆಯದುವೆ ನಿತ್ಯ
ಸುಂದರ
ಆ ಪ್ರೇಮಭರಿತ ಹೃದಯವದು ದೇವ
ಮಂದಿರ ||

ದೇವನವನೆ ಪ್ರೇಮರೂಪ ದಯಾಸಾಗರ
ಆ ದೈವರಕ್ಷೆ ಕಾವುದೆಲ್ಲ ಪ್ರೇಮಜೀವರ

5.ಅಕೋ ನೋಡು

ಅಕೋ ನೋಡು ಬೆಣ್ಣೆ ಗಡಿಗೆ

ಕೂಗಿ ಕರೆದಿದೆ

ಬಾ ಗೆಳೆಯ ಕದ್ದು ತಿನುವ

ಸದ್ದು ಮಾಡದೇ

ಗೋಪಿ ಇಲ್ಲೇ ಕಣ್ಣು ಮುಚ್ಚಿ

ನಿದ್ರಿಸುತಿಹಳು

ಸದ್ದು ಕೇಳಿ ಮರು ಘಳಿಗೆಯೇ

ಎದ್ದು ಬಿಡುವಳು

ಹೆಜ್ಜೆ ಮೇಲೆ ಹೆಜ್ಜೆ ಇಟ್ಟು

ಒಳಗೆ ಹೋಗುವ

ಸಜ್ಜೆ ಮೇಲೆ ಇಟ್ಟ ಮಡಕೆ

ಕೆಳಗೆ ಇಳಿಸುವ

ಕೊಂಚ ನನಗೆ ಕೊಂಚ ನಿನಗೆ

ಹಂಚಿ ತಿನ್ನುವ

ಪಂಚೇಂದ್ರಿಯ ತಣಿವವರೆಗೂ

ಸೇರಿ ಮೆಲ್ಲುವ

ಅಯ್ಯೋ ಗೆಳೆಯ ಕೈ ಜಾರಿ

ಮಡಕೆ ಒಡೆಯಿತು

ಗೋಪಮ್ಮಗೆ ತಿಳಿಯಿತೆನ್ನು

ಕತೆಯೇ ಮುಗಿಯಿತು

ಆಕೆ ಎದ್ದು ಬರುವ ಮೊದಲು

ಓಡಿ ಹೋಗುವ

ಏನೂ ಅರಿಯದಂತೆ ನಾವು

ನಟನೆ ಮಾಡುವ

ನಿತ್ಯ ಅಮ್ಮನೊಡನೆ ಇದೇ

ಕಣ್ಣಾ ಮುಚ್ಚಾಲೆ

ತಿಳಿಯದೇನು ಆ ತಾಯಿಗೆ

ಕೃಷ್ಣನ ಲೀಲೆ !!!

- ಮಧು ಕೋಡನಾಡು

6.ಹರಿ ಸುಂದರ ನಂದ ಮುಕುಂದ

ಹರಿ ಸುಂದರ ನಂದ ಮುಕುಂದ

ಹರಿ ನಾರಾಯಣ ಹರಿ ಓಂ
ಹರಿ ಸುಂದರ ನಂದ ಮುಕುಂದ
ಹರಿ ನಾರಾಯಣ ಹರಿ ಓಂ
ಹರಿ ಕೇಶವ ಹರಿ ಗೋವಿಂದ
ಹರಿ ನಾರಾಯಣ ಹರಿ ಓಂ
ಹರಿ ಕೇಶವ ಹರಿ ಗೋವಿಂದ
ಹರಿ ನಾರಾಯಣ ಹರಿ ಓಂ

ವನಮಾಲಿ ಮೂರಳಿಧಾರಿ
ಗೋವರ್ಧನ ಗಿರಿವರ್ಧಾರಿ
ವನಮಾಲಿ ಮೂರಳಿಧಾರಿ
ಗೋವರ್ಧನ ಗಿರಿವರಧಾರಿ
ನಿತ್ ನಿತ್ ಕರ ಮಾಖನ ಚೋರಿ
ಗೋಪಿ ಮನ ಹಾರಿ
ಆಓ ರೇ ಗಾಓ ರೇ ಗೋಕುಲ ಕೆ ಪ್ಯಾರೆ
ಆಓ ರೇ ಕಾನ್ಹಾ ರೇ ಗೋಕುಲ ಕೆ ಪ್ಯಾರೆ
ಆಓ ರೇ ನಾಚೋ ರೇ ರಾಸ ರಚಾಓ ರೇ
ಗಾಓ ರೇ ನಾಚೋ ರೇ ರಾಸ ರಚಾಓ ರೇ

ಹೇ ಮೋರ ಮುಖುಟ್ ಗಿರಿಧಾರಿ
ಕಾನ್ಹಾ ಪೀತಾಂಭರ ಧಾರಿ
ಹೇ ಮೋರ ಮುಖುಟ್ ಗಿರಿಧಾರಿ
ಕಾನ್ಹಾ ಪೀತಾಂಭರ ಧಾರಿ
ಗೋಪಿಯಾಂ ಸಂಗ ರಾಸ ರಚಾಯೇ
ಮೋಹನ ಮೂರಳಿ ಧಾರಿ
ಆಓ ರೇ ಆಓ ರೇ ಮೋಹನ ಗಿರಿಧಾರಿ
ಆಓ ರೇ ಕಾನ್ಹಾ ರೇ ಹೇ ಕೃಷ್ಣ ಮೂರಾರಿ
ಆಓ ರೇ ನಾಚೋ ರೇ ರಾಸ ರಚಾಓ ರೇ
ಗಾಓ ರೇ ನಾಚೋ ರೇ ರಾಸ ರಚಾಓ ರೇ

7.
"! ಪುಟಾಣಿ ನೀಲಿ...

- ಎಚ್. ಎಸ್. ವೆಂಕಟೇಶಮೂರ್ತಿ

ಓ! ಪುಟಾಣಿ ನೀಲಿ ಹಕ್ಕಿ, ಹಾಡು ಹಾಡು
ಹಾಡು ಹಾಡು ||

ಚಂದ್ರ ಇದಾನೆ ಬಾನಲ್ಲಿ ಬೆಳದಿಂಗಳು ಈ
ಕಾನಲ್ಲಿ

ಬರಲೇ ಬೇಕು ನೀನಿಲ್ಲಿ ಹಾರಾಡುವ
ಮಾತಿನ ಮಲ್ಲಿ

ಅಲೆ ಯಾಡುತಿವೆ ಕೊಳದಲ್ಲಿ ತೆನೆ
ತೂಗುತ್ತಿವೆ ಹೊಲದಲ್ಲಿ

ಬರಲೇ ಬೇಕು ನೀನಿಲ್ಲಿ ಹಾರಾಡುವ
ಮಾತಿನ ಮಲ್ಲಿ

ಬೆಳಕ್ಕಿಗಳಿವೆ ಸರದಲ್ಲಿ  ಗಿಳಿಗಳು ಹಚ್ಚನೆ
ಮರದಲ್ಲಿ

ನೀಲಿಯೊಳಾಡುವ ನೀಲಿಯ ಹಕ್ಕಿ

ಬರಲೇ ಬೇಕು ನೀನಿಲ್ಲಿ ಹಾರಾಡುವ
ಮಾತಿನ ಮಲ್ಲಿ"